


ಟಾಮ್ ವತ್ತಕುಝಿ ಅವರ ಕಲಾಕೃತಿ ‘ಡೆತ್ ಆಫ್ ಗಾಂಧಿ’

ರಚಿಸುವುದನ್ನು ಒಂದು ಸಂಪ್ರದಾಯವನ್ನಾಗಿಸಿಕೊಂಡಿದ್ದಾರೆ. ಧರ್ಮಾಚರಣೆ ಹಾಗೂ ಜನಪ್ರಿಯ ಹಬ್ಬಗಳ ನಡುವಣ ಅನನ್ಯ ಸ್ಥಿತಿ ಈ ‘ಗಾಂಧೀ ನಿರೂಪಣೆ’ಯ ಇಚ್ಛಿತ ವೃತ್ತಿ. ಗಣೇಶ ಹಬ್ಬಕ್ಕೆ ಗಣೇಶನನ್ನು ಫೇಸ್‌ಬುಕ್‌ನಂತಹ ಮಾಧ್ಯಮದಲ್ಲಿ ಮೂಡಿಸುವುದನ್ನು ಕಲಾವಿದರು ಒಂದು ಪಕ್ಷ ಮೂಡಿಸದಿರಬಹುದು; ಆದರೆ ಅಕ್ಟೋಬರ್ ಎರಡರಂದು ಲಾಲ್ ಬಹದ್ದೂರರನ್ನು ಮರೆಮಾಡಿ – ಒಂದು ಕನ್ನಡಕ, ಒಂದು ಕೋಲು, ಧೋತಿ ತೊಟ್ಟ ಅಜ್ಜನ ಕಲಾಕೃತಿ ಹಾಗೂ ಧೋತಿ ತೊಟ್ಟ ಅಜ್ಜನೊಬ್ಬನಿಗೆ ಸಿಲ್ವರ್ ಬಣ್ಣ ಬಳಿದು ಅವರ ಫೋಟೋ–ಪರ್ಫಾರ್ಮೆನ್ಸ್ ಕೃತಿಯೊಂದು ಖಂಡಿತ ಇದ್ದೇ ಇರುತ್ತದೆ (ಬೆಂಗಳೂರಿನ ಕಲಾವಿದ ಕಾಪ್ ಶಿವ ಅವರ ‘ಗಾಂಧಿ ಸರಣಿ’ಯ ಪರ್ಫಾರ್ಮೆನ್ಸ್